## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಪಾವಗಡ

**ಸಿ ಸಿ ನಂ.1241/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಭರತ್ | ಚಾ ಸಾ -7 |
| ತಂದೆಯ ಹೆಸರು | - | ಶಿವಣ್ಣ | ಫ್ರಾ ಸಾ -2 |
| ವಯಸ್ಸು | - | 38 ವರ್ಷ | |
| ಉದ್ಯೋಗ | - | ಪೋಲಿಸ್ ಪೇದೆ | |
| ವಾಸ ಸ್ಥಳ | - | ಪಾವಗಡ | |

ದಿನಾಂಕಃ 03.10.2024 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:

ನಾನು 2015 ರಿಂದ 2021 ರವರೆಗೆ ಪಾವಗಡ ಠಾಣೆಯಲ್ಲಿ ಪೋಲಿಸ್ ಪೇದೆ ಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿ.29.09.2020 ರಂದು ಚಾಸಾ-22 ರವರು ಪಾವಗಡ ಠಾಣೆಯ 158/2020 ರ ಪ್ರಕರಣದಲ್ಲಿ ಸಂಜು @ ಸಂಜೀವರಾಯ ಬಿನ್ ಲೇಟ್ ಮಾರಪ್ಪ, 23 ವರ್ಷ ಇವರ ಪತ್ತೆಗಾಗಿ ನನ್ನನ್ನು ಮತ್ತು ಚಾಸಾ-5 ರವರನ್ನು ನೇಮಕ ಮಾಡಿದ್ದು, ಅದರಂತೆ ನಾವುಗಳು ಅದೇ ದಿನ ಕೊಮಾರ್ಲಹಳ್ಳಿಗೆ ಹೋಗಿರುತ್ತೇವೆ. ಭಾತ್ಮಿದಾರದಿಂದ ಮಾಹಿತಿ ಪಡೆದು ಸದರಿ ಸಂಜು @ ಸಂಜೀವರಾಯ ರವರ ಮನೆಯ ಬಳಿ ಹೋಗಿದ್ದು, ಆತನ ಮನೆಯಲ್ಲಿ ಇದ್ದ ಕಾರಣ ಆತನನ್ನು ಸಂಜೆ 6.30 ಗಂಟೆಗೆ ನಮ್ಮ ವಶಕ್ಕೆ ಪಡೆದು, ರಾತ್ರಿ 7.30 ಗಂಟೆಗೆ ಚಾಸಾ-22 ರವರ ಮುಂದೆ ವರದಿ ಸಮೇತ ಆತನನ್ನು ಹಾಜರುಪಡಿಸಿರುತ್ತೇವೆ. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ವರದಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಪಿ.ಹೆಚ್.ಎಸ್ ವಕೀಲರಿಂದಃ

ನಾವು ಕೋಮಾರ್ಲಹಳ್ಳಿಗೆ ಸಂಜೆ 4.30-5.00 ಗಂಟೆಗೆ ಹೋಗಿರುತ್ತೇವೆ. ಸದರಿ ಮನೆ ಊರಿನ ಆಚೆ ಇತ್ತು. ಆರೋಪಿಯ ಹೊಲ ಬೇರೆ ಕಡೆ ಇರುತ್ತದೆ. ಊರಿನಲ್ಲಿರುವ ಮನೆಯಲ್ಲಿ ಆರೋಪಿಯನ್ನು ವಶಕ್ಕೆ ಪಡೆದಿರುತ್ತೇನೆ. ಆರೋಪಿಯ ಮನೆಯ ಅಕ್ಕ ಪಕ್ಕ ಬೇರೆ ಯಾವ ಮನೆಗಳು ಬರುತ್ತವೆ ಎಂದು ನನಗೆ ನೆನಪಿಲ್ಲ. ಆರೋಪಿಯ ಮನೆ ಎಂತಹ ಮನೆ ಎಂದು ಈಗ ನೆನಪಿಲ್ಲ. ಆರೋಪಿಯ ಮನೆಯ ಬಳಿ ಹೋಗಿರುತ್ತೇವೆ ಎಂದು ತೋರಿಸಲು ಯಾವುದೇ ಪೋಟೋ ತೆಗೆದಿಲ್ಲ. ದಿ.29.09.2020 ರಂದು ನಾನು ಅಥವಾ ಚಾಸಾ-5 ರವರು ಆರೋಪಿಯ ಮನೆಗೆ ಹೋದ ವಿಚಾರ ಸುಳ್ಳು ಎಂದರೆ ಸರಿಯಲ್ಲ, ನಾನು ಆರೋಪಿಯನ್ನು ವಶಕ್ಕೆ ಪಡೆದು ವರದಿಯೊಂದಿಗೆ ಹಾಜರುಪಡಿಸಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಮನೆ ಬಾಗಿಲು ಪೂರ್ವ ದಿಕ್ಕಿಗೆ ಇತ್ತು. ಆರೋಪಿಯ ಮನೆ ಬಾಗಿಲು ಪಶ್ಚಿಮ ದಿಕ್ಕಿಗೆ ಇತ್ತು, ನಾನು ಅಲ್ಲಿಗೆ ಹೋಗದ ಕಾರಣ ನನಗೆ ಸದರಿ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿ.29.09.2020 ರಂದು 2 ನೇ ಆರೋಪಿಯು ಹೊಲದಲ್ಲಿ ಇದ್ದ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ